ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಮಸಾಸಂಇ : ಉ ನಿ : ಸುಮಪ : 2019–20 : ದಿನಾಂಕ: 26–11–2019

<u>ಪತ್ರಿಕಾ ಪ್ರಕಟಣೆ</u>

# ಸ್ವಾರ್ಥವನ್ನು ಬದಿಗಿಟ್ಟು ಜನಹಿತವನ್ನು ಕಾಪಾಡುವ ಸನ್ನಡತೆ ಮತ್ತು ನಿಷ್ಠಾವಂತ ಜನಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಲಿ : ನ್ಯಾ ಎನ್ ಕುಮಾರ್

ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ) :

ಸ್ವಾರ್ಥವನ್ನು ಬದಿಗಿಟ್ಟು ಜನಹಿತವನ್ನು ಕಾಪಾಡುವ ಸನ್ನಡತೆ ಮತ್ತು ನಿಷ್ಠಾವಂತ ಜನಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಲಿ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ನ್ಯಾ : ಎನ್. ಕುಮಾರ್ ಅವರು ಇಲ್ಲಿ ಇಂದು ಆಶಿಸಿದರು.

ಕರ್ನಾಟಕ ವಿಧಾನ ಮಂಡಲವು ಆಯೋಜಿಸಿದ್ದ ಸಂವಿಧಾನ ದಿವಸ್ ಸಮಾರಂಭದಲ್ಲಿ ಭಾರತ ಸಂವಿಧಾನ : ಒಂದು ಪಕ್ಷಿನೋಟ ಕುರಿತಂತೆ ಪ್ರಧಾನ ಭಾಷಣ ಮಾಡಿದ ಅವರು ಭಾರತದ ಸಂವಿಧಾನ ಅಂಗೀಕಾರವಾದದ್ದು 1949 ರ ನವೆಂಬರ್ 26 ರಂದು. ಅಂತೆಯೇ, ಸಂವಿಧಾನ ಅನುಷ್ಠಾನಕ್ಕೆ ಬಂದಿದ್ದು 1950 ರ ಜನವರಿ 26 ರಂದು. ಅಂದಿನಿಂದ ಇಂದಿನವರೆಗೂ ಶಾಸಕಾಂಗ ಮತ್ತು ಕಾರ್ಯಾಂಗದ ನಡೆಯನ್ನು ವ್ಯಾಖ್ಯಾನಿಸಿ ವಿಶ್ಲೇಷಣೆ ಮಾಡಿ ಸಂವಿಧಾನವನ್ನು ರಕ್ಷಿಸುವಲ್ಲಿ ನ್ಯಾಯಾಲಯಗಳು ಮಹತ್ತರ ಪಾತ್ರ ನಿರ್ವಹಿಸಿವೆ ಎಂದು ಬಣ್ಣಿಸಿದರು.

ನಾವು ಸ್ವಾತಂತ್ರ್ಯ ಕಾಣುವ ಮುನ್ನ ಕಂಡ ನೂರಾರು ವರ್ಷಗಳ ನೋವು, ಭಾರತವು ಸ್ವಾತಂತ್ರ್ಯ ಗಳಿಸಿ ಸಂವಿಧಾನ ರಚನೆಯಾದಾಗ ಅಂತ್ಯಗೊಂಡಿದೆ. ಭಾರತ ಸಂವಿಧಾನವು ಕಾನೂನುಗಳ ತಾಯಿಯಾಗಿದೆ. ಅದರ ಮೂಲಕ ರಾಷ್ಟ್ರವು ಪ್ರಗತಿಯತ್ತ ಮುನ್ನಡೆಯುತ್ತಿದೆ. ಬ್ರಿಟಿಷರ ಆಳ್ವಿಕೆಯಲ್ಲಿ 1919 ರಲ್ಲಿ ಅಸ್ತಿತ್ವಕ್ಕೆ ಬಂದ ಭಾರತ ಸರ್ಕಾರ ಕಾಯಿದೆ ಹಾಗೂ ನಂತರ 1935 ರಲ್ಲಿ ಜಾರಿಗೊಂಡ ಭಾರತ ಸರ್ಕಾರ ಕಾಯಿದೆ, ತದನಂತರ 1944 ರ ಡಿಸೆಂಬರ್ 9 ರಂದು ರಚನೆಗೊಂಡ 18 ವಿವಿಧ ಸಮಿತಿಗಳ ಶಿಫಾರಸ್ಸುಗಳು ಮತ್ತು ಸಲಹೆಗಳು ಭಾರತ ಸಂವಿಧಾನಕ್ಕೆ ಬುನಾದಿಯಾಗಿವೆ. ಭಾರತ ಸಂವಿಧಾನದ ಮೊದಲನೇ ಕರಡು 243 ಪರಿಚ್ಛೇಧಗಳನ್ನು ಒಳಗೊಂಡಿತ್ತು. ಎರಡನೇ ಕರಡು 315 ಹಾಗೂ ಮೂರನೇ ಕರಡು 384 ಪರಿಚ್ಛೇಧಗಳನ್ನು ಒಳಗೊಂಡು ಡಾ : ಬಿ. ಆರ್. ಅಂಬೇಡ್ಕರ್ ಅವರ ನೇತೃತ್ವ ಹಾಗೂ ದೂರದೃಷ್ಟಿಯಲ್ಲಿ ಬೃಹತ್ ಸಂವಿಧಾನವಾಗಿ ರೂಪುಗೊಂಡಿದ್ದು, ಇದೀಗ ಇತಿಹಾಸವಾಗಿದೆ ಎಂದರು.

**ನೂರಕ್ಕೂ ಹೆಚ್ಚು ಬಾರಿ ತಿದ್ದುಪಡಿಯಾದರೂ, ಸಂವಿಧಾನದ ಮೂಲಭೂತ ಆಶಯಗಳಿಗೆ ಧಕ್ಕೆಯಾಗಿಲ್ಲ !**

ಅಮೇರಿಕ, ಆಸ್ಟ್ರೇಲಿಯ, ಫ್ರಾನ್ಸ್, ಐರ್ಲೆಂಡ್, ಜಪಾನ್, ಸ್ವಿಜರ್‌ಲ್ಯಾಂಡ್ ಒಳಗೊಂಡಂತೆ ಅರವತ್ತಕ್ಕೂ ಹೆಚ್ಚು ರಾಷ್ಟ್ರಗಳ ಸಂವಿಧಾನಗಳಲ್ಲಿ ಅಡಕಗೊಂಡಿರುವ ಉತ್ಕೃಷ್ಟ ಅಂಶಗಳನ್ನು ನಮ್ಮ ಸಂವಿಧಾನದಲ್ಲಿ

ಅಳವಡಿಸಿಕೊಂಡಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೊಡನೆ ಅಧಿಕಾರ ಹಂಚಿಕೆ ಮತ್ತು ಹೊಂದಾಣಿಕೆಯ ಒಕ್ಕೂಟ ವ್ಯವಸ್ಥೆ ಹಾಗೂ ಮೂಲಭೂತ ಹಕ್ಕುಗಳ ಪ್ರತಿಪಾದನೆಯನ್ನು ಅಮೇರಿಕ ಸಂವಿಧಾನದಿಂದ ಎರವಲು ಪಡೆದಿದ್ದೇವೆ ಎಂಬುದು ಒಂದು ಸಣ್ಣ ಉದಾಹರಣೆ. ಭಾರತ ಸಂವಿಧಾನವು ಒಂದು ನೂರಕ್ಕೂ ಹೆಚ್ಚು ಬಾರಿ ತಿದ್ದುಪಡಿಯಾಗಿದೆಯಾದರೂ, ಸಂವಿಧಾನದ ಮೂಲಭೂತ ಆಶಯಗಳಿಗೆ ಯಾವುದೇ ಧಕ್ಕೆ ಉಂಟಾಗಿಲ್ಲ ಎಂಬುದು ಭಾರತ ಸಂವಿಧಾನದ ವಿಶೇಷತೆ ಮತ್ತು ಶ್ರೇಷ್ಠತೆಗೆ ಸಾಕ್ಷಿ. ಭಾರತ ಸರ್ವೋಚ್ಚ ನ್ಯಾಯಾಲಯವು ಕೇಶವಾನಂದ ಭಾರತಿ ಪ್ರಕರಣದಲ್ಲಿ ಭಾರತ ಸಂವಿಧಾನದ ಮೂಲಭೂತ ಆಶಯಗಳನ್ನು ಕಾಯ್ದು ಕೊಳ್ಳುವಲ್ಲಿ ಮೈಲಿಗಲ್ಲಾಗಿದೆ. ಸರ್ವೇ ಜನಾಃ ಸುಖಿನೋ ಭವಂತು ಎಂಬ ಭಾರತೀಯ ಸಂಸ್ಕೃತಿಯನ್ನು ನಮ್ಮ ಭಾರತ ಸಂವಿಧಾನವು ಬಿಂಬಿಸುತ್ತದೆ ಎಂದು ನ್ಯಾ : ಕುಮಾರ್ ಅವರು ವ್ಯಾಖ್ಯಾನಿಸಿದರು.

ಸಂವಿಧಾನವು ಎಷ್ಟೇ ಸಶಕ್ತವಾಗಿದ್ದರೂ, ಅದನ್ನು ಅನುಷ್ಠಾನ ಮಾಡುವವರು ಕೆಟ್ಟ ಜನರಾದರೆ, ಸಂವಿಧಾನದ ಆಶಯಗಳು ವೈಫಲ್ಯತೆ ಕಾಣುತ್ತವೆ. ಸಂವಿಧಾನವು ಎಷ್ಟೇ ದುರ್ಬಲವಾಗಿದ್ದರೂ, ಅದನ್ನು ಅನುಷ್ಠಾನಗೊಳಿಸುವವರು ಒಳ್ಳೆಯ ಜನರಾದರೆ, ಸಂವಿಧಾನದ ಆಶಯಗಳು ಸಫಲವಾಗುತ್ತದೆ ಎಂಬ ಡಾ : ಬಿ. ಆರ್. ಅಂಬೇಡ್ಕರ್ ಅವರ ಸ್ಮರಣಾರ್ಹ ನುಡಿಗಳನ್ನು ಮೆಲುಕು ಹಾಕಿದ ಅವರು ಬಡತನ ನಿರ್ಮೂಲನೆ, ಹಸಿವು ಮುಕ್ತ ರಾಷ್ಟ್ರ ನಿರ್ಮಾಣ, ಶಿಕ್ಷಣ ಮತ್ತು ಉದ್ಯೋಗಕ್ಕೆ ಸಮಾನ ಅವಕಾಶ ನಮ್ಮ ಸಂವಿಧಾನದ ಗಮನಾರ್ಹ ಅಂಶಗಳಾಗಿವೆ. ಅಲ್ಲದೆ, 1976 ರಲ್ಲಿ ಹಕ್ಕುಗಳ ಜೊತೆಗೆ ಕರ್ತವ್ಯಗಳೂ ಕೂಡಾ ಸಂವಿಧಾನದಲ್ಲಿ ಅಡಕಗೊಂಡಿರುವುದು ಉಲ್ಲೇಖಾರ್ಹ ಎಂದು ಹೇಳಿದರು.

ಜನರ ಭಾವನೆಗಳಿಗೆ ಸಂವಿಧಾನದಲ್ಲಿ ಅಕ್ಷರ ರೂಪ ಕೊಟ್ಟ ಅಂಬೇಡ್ಕರ್

ರಾಜ್ಯ ವಿಧಾನ ಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಜನರ ಭಾವನೆಗಳಿಗೆ ಭಾರತೀಯ ಸಂವಿಧಾನದ ಮೂಲಕ ಅಕ್ಷರ ರೂಪಕೊಟ್ಟ ಡಾ : ಬಿ. ಆರ್. ಅಂಬೇಡ್ಕರ್ ಅವರನ್ನು ಗುಣಗಾನ ಮಾಡಿದರು. ಅಲ್ಲದೆ, ರಾಜನೇ ಕಾನೂನು ಆಗಿದ್ದ ಕಾಲದಿಂದ ಕಾನೂನನ್ನೇ ರಾಜನಾಗಿ ಪರಿವರ್ತಿತವಾದದ್ದು ನಮ್ಮ ಸಂವಿಧಾನವನ್ನು ರಚಿಸಿ ರೂಪಿಸಿದ ಡಾ : ಬಿ. ಆರ್. ಅಂಬೇಡ್ಕರ್ ಅವರ ಸ್ವ ಅನುಭವ ಮತ್ತು ಆಳವಾದ ಜ್ಞಾನಕ್ಕೆ ಎಲ್ಲರೂ ತಲೆದೂಗಬೇಕು ಹಾಗೂ ತಲೆಬಾಗಬೇಕು ಎಂದರು.

ನ್ಯಾಯ ವಿಳಂಬವಾದಲ್ಲಿ ನ್ಯಾಯ ನಿರಾಕರಿಸಿದಂತೆ ಎಂಬ ಆಂಗ್ಲ ಭಾಷಾ ನಾಣ್ಣುಡಿ ಕೇವಲ ನ್ಯಾಯಾಂಗಕ್ಕೆ ಅನ್ವಯಿಸುವುದಲ್ಲ, ಶಾಸಕಾಂಗ ಮತ್ತು ಕಾರ್ಯಾಂಗಗಳಿಗೂ ಅನ್ವಯಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತದ ಸಂವಿಧಾನ ರಚನೆಯಲ್ಲಿ ಕರ್ನಾಟಕದ ಕೊಡುಗೆಯೂ ಇದೆ ಎಂದು ಹೇಳಿ ಕನ್ನಡ ನಾಡಿನ ಬೆನೆಗಲ್ ನರಸಿಂಗರಾಯರನ್ನು ಸ್ಮರಿಸಿದರು. ವಾಕ್ ಸ್ವಾತಂತ್ರ್ಯ ಇಲ್ಲದ ಆ ಕಾಲದಲ್ಲಿ ಇಂತಹ ಉತ್ಕೃಷ್ಟ ಸಂವಿಧಾನ ರಚನೆಯಾಗಿದೆ. ಇದೀಗ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯವೂ ಒಳಗೊಂಡಂತೆ ಎಲ್ಲಾ ಸ್ವಾತಂತ್ರ್ಯಗಳೂ ಇರುವಾಗ ಸಂವಿಧಾನದ ಪರಿಪಾಲನೆಯಾಗಬೇಕಿದೆ ಎಂದು ಅವರು ಬಯಸಿದರು.

ಸಂವಿಧಾನವನ್ನು ಖರೀದಿಸಿ, ಓದಿ ಮತ್ತು ಅದರಲ್ಲಿನ ಅಂಶಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿ !

ಇದೇ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ವಿಧಾನ ಪರಿಷತ್‌ನ ಸಭಾಪತಿ ಕೆ. ಪ್ರತಾಪ್‌ಚಂದ್ರ ಶೆಟ್ಟಿ ಅವರು ಭಾರತ ಸಂವಿಧಾನ ಎಂದರೆ ಡಾ : ಬಿ. ಆರ್. ಅಂಬೇಡ್ಕರ್ ಅವರು ನೆನಪಿಗೆ ಬರುತ್ತಾರೆ. ಡಾ : ಬಿ. ಆರ್. ಅಂಬೇಡ್ಕರ್ ಎಂದರೆ ಭಾರತ ಸಂವಿಧಾನವು ನೆನಪಿಗೆ ಬರುತ್ತದೆ ಎಂದರಲ್ಲದೆ, ನಾವು ಭಗವದ್ಗೀತೆಯನ್ನು ಖರೀದಿಸುತ್ತೇವೆ ಓದುತ್ತೇವೆ ಹಾಗೂ ಅನುಷ್ಠಾನಕ್ಕೆ ತರಲು ಯತ್ನಿಸುತ್ತೇವೆ. ಅಂತೆಯೇ, ಎಲ್ಲರೂ ಸಂವಿಧಾನದ ಪುಸ್ತಕವನ್ನು ಖರೀದಿಸಿ, ಓದಿ ಹಾಗೂ ಅದರಲ್ಲಿನ ಅಂಶಗಳನ್ನು ಪಾಲಿಸಲು ಪ್ರಯತ್ನಿಸಬೇಕು ಎಂದು ಹಿತ ನುಡಿದರು.

ಹೆಸರಾಂತ ನಿರ್ದೇಶಕ ಶ್ಯಾಮ್ ಬೆನೆಗಲ್ ಅವರು ನಿರ್ದೇಶಿಸಿ ಸಂಸತ್ತು ನಿರ್ಮಿಸಿದ ಭಾರತ ಸಂವಿಧಾನ ಕುರಿತ ಸಾಕ್ಷ್ಯಚಿತ್ರವು ಕನ್ನಡ ಅವತರಣಿಕೆಯಲ್ಲಿ ಹೊರಬರಬೇಕು. ಅದನ್ನು ನೋಡುವ ಸೌಭಾಗ್ಯ ನಮಗೆ ಶೀಘ್ರವೇ ಲಭಿಸಬೇಕು ಎಂದು ಆಶಿಸಿದರು.

ಈ ಮುನ್ನ, ರಾಜ್ಯ ವಿಧಾನ ಪರಿಷತ್ ಕಾರ್ಯದರ್ಶಿ ಕೆ ಆರ್ ಮಹಾಲಕ್ಷ್ಮಿ ಅವರು ಸ್ವಾಗತಿಸಿದರು. ರಾಜ್ಯ ವಿಧಾನ ಸಭೆಯ ಕಾರ್ಯದರ್ಶಿ ಎಂ ಕೆ ವಿಶಾಲಾಕ್ಷಿ ಅವರು ಗಣ್ಯರು ಹಾಗೂ ಸಭಿಕರಿಗೆ ಸಂವಿಧಾನದ ಆಶಯಗಳ ಪ್ರಮಾಣ ವಚನ ಬೋಧಿಸಿ, ನಂತರ ವಂದಿಸಿದರು.

ಛಾಯಾಚಿತ್ರ ಶೀರ್ಷಿಕೆ :

1) ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ನಡೆದ ಸಂವಿಧಾನ ದಿವಸ್ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕರ್ನಾಟಕ ಸರ್ಕಾರದ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಪ್ರತಿಜ್ಞಾವಿಧಿ ಬೋಧನೆ ಬೋಧಿಸಿದರು. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ. ಎಂ. ವಿಜಯ ಭಾಸ್ಕರ್ ಅವರು ಹಾಗೂ ಸಚಿವಾಲಯದ ಹಿರಿಯ ಅಧಿಕಾರಿಗಳು ಹಾಗೂ ನೌಕರರುಗಳು ಉಪಸ್ಥಿತರಿದ್ದರು.

2) ವಿಧಾನ ಸೌಧದ ಔತಣ ಸಭಾಂಗಣದಲ್ಲಿ ಮಂಗಳವಾರ ನಡೆದ ಸಂವಿಧಾನ ದಿವಸ್ ಕಾರ್ಯಕ್ರಮದಲ್ಲಿ ರಾಜ್ಯ ವಿಧಾನ ಪರಿಷತ್ ಸಭಾಪತಿ ಕೆ. ಪ್ರತಾಪ್ ಚಂದ್ರ ಶೆಟ್ಟಿ, ರಾಜ್ಯ ವಿಧಾನ ಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎನ್. ಕುಮಾರ್ ಅವರು ಪಾಲ್ಗೊಂಡಿದ್ದರು.

**3) AN ACHIEVEMENT OF A KANNADIGA !**

**The President of the Indian Academy of Oral Medicine and Radiology Dr Vishal Dang presented Life Time Achievement Award in Oral Medicine and Radiology to the former Principal of the Rastriya Vidyalaya Dental College and Eminent Dentist Dr K S Nagesh at a Special Function held at Amritsar in Punjab, recently.**

4) ಓರ್ವ ಕನ್ನಡಿಗನ ಸಾಧನೆ !

ಭಾರತೀಯ ಮೌಖಿಕ ವೈದ್ಯ ಹಾಗೂ ಕ್ಷ-ಕಿರಣ ಶಾಸ್ತ್ರ ಅಕಾಡೆಮಿಯ ಅಧ್ಯಕ್ಷ ಡಾ ವಿಶಾಲ್ ಡ್ಯಾಂಗ್ ಅವರು ಇತ್ತೀಚೆಗೆ ಪಂಜಾಬ್‌ನ ಅಮೃತಸರದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ರಾಷ್ಟ್ರೀಯ ವಿದ್ಯಾಲಯ ದಂತವೈದ್ಯ ಮಹಾವಿದ್ಯಾಲಯದ ನಿವೃತ್ತ ಪ್ರಾಂಶುಪಾಲ ಹಾಗೂ ಹೆಸರಾಂತ ದಂತವೈದ್ಯ ಡಾ ಕೆ ಎಸ್ ನಾಗೇಶ್ ಅವರಿಗೆ ಮೌಖಿಕ ವೈದ್ಯ ಹಾಗೂ ಕ್ಷ-ಕಿರಣ ಶಾಸ್ತ್ರ ಕ್ಷೇತ್ರದಲ್ಲಿನ ಜೀವಿತಾವಧಿ ಸಾಧನಾ ಪ್ರಶಸ್ತಿ ಪ್ರದಾನ ಮಾಡಿದರು.

## ಅಹವಾಲು ಹಾಗೂ ಮನವಿ ಸ್ವೀಕಾರ

**ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಈಗಿರುವ ಮೀಸಲಾತಿಯನ್ನು ಹೆಚ್ಚಿಸುವ ಕುರಿತು ವರದಿ ನೀಡಲು ನ್ಯಾಯಮೂರ್ತಿ ಶ್ರೀ ಎಚ್.ಎನ್. ನಾಗಮೋಹನ್ ದಾಸ್‌ರವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಲಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಠ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಈಗಿರುವ ಮೀಸಲಾತಿಯನ್ನು ಹೆಚ್ಚಿಸುವ ಕುರಿತು ಆಸಕ್ತಿಯಿರು ಸಾರ್ವಜನಿಕರು, ಸಂಬಂಧಿಸಿದ ಸಮುದಾಯಗಳ ಸಂಘ-ಸಂಸ್ಥೆಗಳು, ವಿದ್ವಾಂಸರು, ಸಾಮಾಜಿಕ ಕಾರ್ಯಕರ್ತರು ತಮ್ಮ ಅಹವಾಲು/ಮನವಿಗಳನ್ನು ಆಯೋಗಕ್ಕೆ ಲಿಖಿತ ರೂಪದಲ್ಲಿ 2019 ರ ಡಿಸೆಂಬರ್ 20 ರ ಒಳಗಾಗಿ ಅಂಚೆಯ ಮುಖಾಂತರ ನ್ಯಾಯಮೂರ್ತಿ ಶ್ರೀ ಎಚ್. ಎನ್. ನಾಗಮೋಹನ್ ದಾಸ್ ಆಯೋಗ, ಸಮಾಜ ಕಲ್ಯಾಣ ಇಲಾಖೆ, ಕಲ್ಯಾಣ ಕೇಂದ್ರ, ಯವನಿಕಾ ಆವರಣ, ನೃಪತುಂಗ ರಸ್ತೆ, ಬೆಂಗಳೂರು ವಿಳಾಸಕ್ಕೆ ಅಥವಾ ಖುದ್ದಾಗಿ ಸಲ್ಲಿಸಬಹುದಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

## ಸಂದರ್ಶನ ಅವಧಿ ಮುಂದೂಡಿಕೆ

**ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಔಷಧ ನಿಯಂತ್ರಣ ಇಲಾಖೆಯಲ್ಲಿ 68+15 (ಹೈ.ಕ.) ಔಷಧ ಪರೀಕ್ಷಕರ ಹುದ್ದೆಗಳ ನೇಮಕಾತಿಗೆ ನವೆಂಬರ್ 25 ರಿಂದ 27 ರವರೆಗೆ ನಿಗದಿಯಾಗಿದ್ದ ಸಂದರ್ಶಗಳನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದೆ. ಸಂದರ್ಶನದ ಪರಿಷ್ಕೃತ ದಿನಾಂಕಗಳನ್ನು ಮುಂದೆ ತಿಳಿಸಲಾಗುವುದು ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

## ಅವಧಿ ವಿಸ್ತರಣೆ

**ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)**

ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ 2019 ರಲ್ಲಿ ಪ್ರಥಮವಾಗಿ ಮುದ್ರಣಗೊಂಡು ಪ್ರಕಟವಾದ ಕನ್ನಡ ಸಾಹಿತ್ಯ , ಪರಾಮರ್ಶನ, ಸ್ಪರ್ಧಾತ್ಮಕ, ಪಠ್ಯಪುಸ್ತಕ ಮತ್ತು ಮಕ್ಕಳ ಪುಸ್ತಕ , ವಿಶ್ವಕೋಶಗಳು, ಕಾನೂನು, ವಿಜ್ಞಾನ, ತಂತ್ರಜ್ಞಾನ, ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಗಳ ಪುಸ್ತಕಗಳು ಹಾಗೂ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕನ್ನಡ ಪುಸ್ತಕಗಳನ್ನು ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಂಥಾಲಯಗಳಿಗೆ ಖರೀದಿಸುವ ಕುರಿತು ವಿವಿಧ ಲೇಖಕ ಪ್ರಕಾಶಕರು/ಪ್ರಕಟಣಾ ಸಂಸ್ಥೆಗಳು/ಸರಬರಾಜುದಾರರಿಂದ ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸಲು ಇದ್ದ

ನವೆಂಬರ್ 20 ರ ಅವಧಿಯನ್ನು ನವೆಂಬರ್ 30 ರವರೆಗೆ ವಿಸ್ತರಿಸಲಾಗಿದೆ. ಈಗಾಗಲೇ ಸಲ್ಲಿಸಿದ ಪುಸ್ತಕಗಳನ್ನು ಮರು ಸಲ್ಲಿಸಬಾರದೆಂದು ಸಾರ್ವಜನಿಕ ಗ್ರಂಥಾಲಯದ ಪ್ರಕಟಣೆ ತಿಳಿಸಿದೆ.

## ಸಂದರ್ಶನ ಅವಧಿ ಮುಂದೂಡಿಕೆ

**ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)**

ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ಮಾರ್ಚ್/ಏಪ್ರಿಲ್ –2020 ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವ ಅರ್ಹ ಶಾಲಾ ವಿದ್ಯಾರ್ಥಿಗಳ (ಅಅಇಖಈ) ಖಾಸಗಿ ಅಭ್ಯರ್ಥಿಗಳು (ಅಅಇಕಈ) ಮತ್ತು ಪುನರಾವರ್ತಿತ ಅಭ್ಯಥಿಫಳ (ಅಅಇಖಖ, ಅಅಇಕಖ, ಓಖಖ ಮತ್ತು ಓಖಕಖ) ಅಭ್ಯರ್ಥಿಗಳ ನೋಂದಣಿಯನ್ನು ಭೌತಿಕವಾಗಿ ಮಂಡಳಿಗೆ ಸಲ್ಲಿಸಲು ಮತ್ತು ಮತು ಪರೀಕ್ಷಾ ಶುಲ್ಕವನ್ನು ನೆಫ್ಟ್ ಮೂಲಕ ಬ್ಯಾಂಕ್‌ಗೆ ಜಮೆ ಮಾಡಲು ದಿನಾಂಕವನ್ನು ವಿಸ್ತರಿಸಿದೆ.

ಅಅಇಖಈ, ಅಅಇಕಈ, ಅಅಇಖಖ, ಅಅಇಕಖ ಓಖಖ ಮತ್ತು ಓಖಕಖ ಮತ್ತು ವಿದ್ಯಾರ್ಥಿಗಳ ಪರೀಕಾ ಶುಲ್ಕವನ್ನು ರೂ 100/– ದಂಡ ಶುಲ್ಕದೊಂದಿಗೆ ಈ ಹಿಂದಿನ ಸಾಲಿನಂತ ಭೌತಿಕವಾಗಿ ನೆಫ್ಟ್ ಚಲನ್ ಮೂಲಕ ಬ್ಯಾಂಕ್‌ಗೆ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 30–11–2019..

ಅಅಇಖಈ, ಅಅಇಕಈ, ಅಅಇಖಖ, ಅಅಇಕಖ, ಓಖಖ ಮತ್ತು ಓಖಕಖ ವಿದ್ಯಾರ್ಥಿಗಳ ಮಾಹಿತಿಯ ಅನುಬಂಧ ಮತ್ತು ಬ್ಯಾಂಕ್ ಚಲನ್‌ನೊಂದಿಗೆ ಭೌತಿಕವಾಗಿ ಮಂಡಳಿಗೆ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 02–12–2019.

ಸದರಿ ವಿದ್ಯಾರ್ಥಿಗಳ ನೋಂದಣಿಯನ್ನು ಆನ್‌ಲೈನ್ ಮುಖಾಂತರ ಅಪ್‌ಲೋಡ್ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಮಂಡಳಿಯು ನಿಗದಿಪಡಿಸಿರುವ ಅನುಬಂಧದಲ್ಲಿ ವಿದ್ಯಾರ್ಥಿಯ ವಿವರಗಳನ್ನು ಭರ್ತಿಮಾಡಿ ಭಾವಚಿತ್ರ ಅಂಟಿಸಿ ಮತ್ತು ವಿದ್ಯಾರ್ಥಿಯ ಸಹಿಯನ್ನು ನಿಗಧಿತ ಸ್ಥಳದಲ್ಲಿ ಮಾಡಿಸಿ ಮಂಡಲಿಗೆ ಭೌತಿಕವಾಗಿ ಸಲ್ಲಿಸಬಹುದಾಗಿದೆ.

## ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ – 2019

**ಬೆಂಗಳೂರು, ನವೆಂಬರ್ 26 (ಕರ್ನಾಟಕ ವಾರ್ತೆ)**

**ಪ್ರತಿ ವರ್ಷದಂತೆ, ಈ ವರ್ಷದ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು ಡಿಸೆಂಬರ್ 6, 2019 ರ (ಶುಕ್ರವಾರ) ಮಧ್ಯಾಹ್ನ 4.00 ಗಂಟೆಗೆ ಬೆಂಗಳೂರಿನ ರಾಜಭವನದಲ್ಲಿ ಏರ್ಪಡಿಸಲಾಗಿದೆ.**

**ಮಾಜಿ ಸೈನಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಲಾಗಿದೆ. ಪಾಲ್ಗೊಳ್ಳಲು ಇಚ್ಛಿಸುವವರು, ಜಂಟಿ ನಿರ್ದೇಶಕರು, ಸೈನಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು (ನಗರ ಜಿಲ್ಲೆ) ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಭವನ, ನಂ 58, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ**

**ರಸ್ತೆ, ಬೆಂಗಳೂರು – 560 025 ಇವರ ಕಾರ್ಯಾಲಯದದಿಂದ ಆಮಂತ್ರಣ ಪತ್ರಿಕೆಯನ್ನು ಪಡೆಯಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.**